ಇಂಗ್ಲಿಷ್‌ನಿಂದ ಮರಾಠಿಗೆ: ದೀಪಕ ಬೋರಗಾವೆ
ಕನ್ನಡಕ್ಕೆ: ಚಂದ್ರಕಾಂತ ಪೋಕಳೆ

# ವಿಶ್ವವಿಖ್ಯಾತ ಲೇಖಕರ ಸಂದರ್ಶನಗಳು

ನೊಬೆಲ್ ಪುರಸ್ಕೃತ ಲೇಖಕರಾದ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಮತ್ತು ಗುಂಥರ್ ಗ್ರಾಸ್ ಅವರ ಸಂದರ್ಶನಗಳನ್ನು ಇಲ್ಲಿ ಕೊಡಲಾಗಿದೆ. ಇಂಗ್ಲಿಷ್‌ನಿಂದ ಮರಾಠಿಗೆ ದೀಪಕ್ ಬೋರಗಾವೆ ಅವರು ಅನುವಾದಿಸಿರುವ ಸಂದರ್ಶಗಳ ಸಂಗ್ರಹ 'ಮುಲುಖಾವೆಗಳ್ಯಾ ಮುಲಾಖತಿ'(ವಿಶಿಷ್ಟ ಜನರೊಂದಿಗೆ ಮಾತುಕತೆ)ಯಿಂದ ಈ ಸಂದರ್ಶನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳ ಆಯ್ದ ಭಾಗಗಳು ಇಲ್ಲಿವೆ.

## 'ನಾನು ಸಮಾಜವಾದಿ ವಾಸ್ತವದ ಕಥೆಗಾರ'

### ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ (1928-2014)

ಜಾಗತಿಕ ಸಾಹಿತ್ಯದ ಓದುಗರಿಗೆ ಸ್ಪ್ಯಾನಿಷ್ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನದು ಪರಿಚಿತ ಹೆಸರು. 6 ಮಾರ್ಚ್ 1928ರಂದು ಕೊಲಂಬಿಯಾದ ಅರಕಾಟಕಾದಲ್ಲಿ ಹುಟ್ಟಿದ ಅವನು ಕಾರ್ಟೆಜಿನಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ. ವೃತ್ತಿಯಿಂದ ಪತ್ರಕರ್ತ. ಕಾದಂಬರಿ, ಕತೆ, ಮತ್ತು ಚಿತ್ರಕಥೆಗಳ ಲೇಖಕ. ಮಾರ್ಕ್ವೆಜ್ 1982ರಲ್ಲಿ ನೊಬೆಲ್ ಪಾರಿತೋಷಕ ಪಡೆದ. 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್', 'ದ ಅಟಮ್ ಆಫ್ ದ ಪೆಟ್ರಿಯಾರ್ಕ್', 'ಲವ್ ಇನ್ ದ ಟೈಮ್ ಆಫ್ ಕಾಲರಾ', 'ಕ್ರಾನಿಕಲ್ ಆಫ್ ಎ ಡೆಥ್ ಫೋರ್‌ಟೋಲ್ಡ್', 'ದ ಜನರಲ್ ಇನ್ ಹಿಸ್ ಲೆಬಿರಿಂತ್', 'ಆಫ್ ಲವ್ ಅಂಡ್ ಅದರ್ ಡೆಮನ್ಸ್', 'ನೋ ಒನ್ ರೈಟ್ಸ್ ಟು ದ ಕರ್ನಲ್', 'ದ ಸ್ಟೋರಿ ಆಫ್ ಶಿಪ್ ರೆಕ್ಡ್ ಸೇಲರ್' ಇವು